

# ರಾಬಿನ್ ಹಕ್ಕಿ ಮತ್ತು ನಾನು...

**ಎಷ್ಟೆಲ್ಲಾ ಕತೆ, ನಂಬಿಕೆ, ಐತಿಹ್ಯಗಳೊಂದಿಗೆ ಗುರುತಿಸಿಕೊಳ್ಳುವ ಈ ಪುಟ್ಟ ರಾಬಿನ್ ಹಕ್ಕಿ ಯಾವ ಡೌಲು, ಧಿಮಾಕು ಮಾಡದ ನಿಗರ್ವಿ, ಸ್ಥಿತಪ್ರಜ್ಞ ಸೆಲೆಬ್ರಿಟಿಯಂತೆ ಕಾಣಿಸುತ್ತದೆ.**

**■ ಅಮಿತಾ ರವಿಕಿರಣ್**

ಎಲ್ಲವೂ ಹೊಸತು, ಊರು, ಭಾಷೆ, ಜೀವನ ಕ್ರಮ, ನಡೆದಾಡುವ ರಸ್ತೆಯಿಂದ ಹಿಡಿದು ಸುತ್ತಮುತ್ತಲಿರುವ ಮರಗಿಡ ಹೂ ಬಳ್ಳಿ, ಕೀಟ, ಹಕ್ಕಿಗಳು ಎಲ್ಲವೂ ಹೊಸದು. ಜನ್ಮಭೂಮಿಯನ್ನು ತೊರೆದು, ಬೇರೆ ದೇಶಕ್ಕೆ ವಲಸೆ ಹೋಗಿ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುವ ಎಲ್ಲ ಅನಿವಾಸಿಗಳ ತೊಳಲಾಟವಿದು. ಅಲ್ಲಿ ಯಾವುದೂ ನಮ್ಮದು ಎಂದೆನಿಸುವುದೇ ಇಲ್ಲ.

16 ವರ್ಷಗಳ ಹಿಂದೆ ನಾನೂ ಇಂಥದ್ದೊಂದು ಅನುಭವಕ್ಕೆ ಒಳಗಾಗಿದ್ದೆ. ಉತ್ತರ ಕರ್ನಾಟಕದಿಂದ, ಉತ್ತರ ಐರ್ಲೆಂಡ್‌ಗೆ ಬಂದು ನೆಲೆ ಕಂಡುಕೊಳ್ಳುವ ಆಯ್ಕೆ ಎಂಬ ಅನಿವಾರ್ಯತೆ ಎದುರಾದಾಗ ನನ್ನ ಮನಸ್ಸಿನಲ್ಲೂ ಸಾವಿರ ಪ್ರಶ್ನೆಗಳಿದ್ದವು. ಹೊಂದಾಣಿಕೆ ಹೇಗೆ? ಎಂಬ ಪ್ರಶ್ನೆ ಕೂಡ ಇತ್ತು. ನನಗೆ ಉತ್ತರವಾಗಿದ್ದು ನಿಸರ್ಗದೊಂದಿಗೆ ನನಗಿದ್ದ ಅನುಬಂಧ. ಕಾಡು, ಹಕ್ಕಿ, ಹಸಿರು, ಕಡಲು ಎಂದು ಸದಾ ಮನಸು ಧೇನಿಸುತ್ತಿರುವಾಗ ಪೂರ್ತಿ ಪೃಥ್ವಿ ನಮ್ಮದೇ, ದೇಶದ ಗಡಿಗಳು ಸುಮ್ಮನೆ ನಾವೇ ಎಳೆದುಕೊಂಡ ಕಾಲ್ಪನಿಕ ರೇಖೆಗಳಲ್ಲದೆ ಹೆಚ್ಚೇನೂ ಅಲ್ಲ! ಇದೇ ನೆಲದ ಇನ್ನೊಂದು ತುದಿಗೆ ನನ್ನ ದೇಶವಿದೆ, ಇಲ್ಲಿರುವ ಸಮುದ್ರ ಸಾಗರದೊಡನೆ ಹಿಂದೂ ಮಹಾಸಾಗರದ ನೀರೂ ಸೇರಿದೆ. ಹೀಗೆ ಏನೇನೋ ಆಲೋಚಿಸಿ, ನನಗೇ ನಾನು ಸಮಾಧಾನ ಮಾಡಿಕೊಳ್ಳುತ್ತಿದ್ದೆ.

ಹಾಗೊಂದು ಅಕ್ಟೋಬರ್ ತಿಂಗಳ ಅಂತ್ಯದಲ್ಲಿ ಉತ್ತರ ಐರ್ಲೆಂಡ್ ದೇಶಕ್ಕೆ ಹೊರಟು ಬಂದಾಗ ನನ್ನನ್ನು ಸ್ವಾಗತಿಸಿದ್ದು ನಾನು ಆ ತನಕ ನೋಡಿರದ, ಆಟಂ ಸೀಸನ್ ಚೆಲುವು, ಅದು ಪರ್ಣಪಾತದ ಕಾಲ. ಮರಗಳೆಲ್ಲಾ ಹಳದಿ, ಕೆಂಪು, ಗಿಳಿ ಹಸಿರು, ಕಡು ಹಸಿರು, ಸೀರೆ ಉಟ್ಟು ಅರಿಶಿಣ ಕುಂಕುಮ ಹಿಡಿದು ಬಲಗಾಲಿಟ್ಟು ಒಳಗೆ ಬಾ ಹುಡುಗಿ ಎಂದು ಹೇಳುತ್ತಿರುವ ಹಿರಿಯ ಮುತ್ತೈದೆಯರಂತೆ ಕಂಡರು. ಆಗಲೇ ಆ ಪುಟ್ಟ ಜೀವ ಮೊದಲ ಸಲ ನನ್ನ ಕಣ್ಣಿಗೆ ಬಿದ್ದಿದ್ದು.

ಮದುವೆ ಮನೆಯಲ್ಲಿ ಓಡಾಡುವ ತುಂಟ, ಪುಟ್ಟ, ಚಂಚಲ ಕಂಗಳ ಉಡಾಳ ಮಗುವಿನಂತೆ ಎಲ್ಲೆಂದರಲ್ಲಿ ಹಾರುತ್ತ ಕುಣಿಯುತ್ತ, ಏನೋ ಮಹತ್ತರ ಕೆಲಸ ಮಾಡುತ್ತಿರುವಂತೆ ವಿಪರೀತ ಮಾತಾಡುತ್ತಿದ್ದ ಸುಂದರ ಹಕ್ಕಿ.

ನಮ್ಮೂರಿನ ಮಡಿವಾಳ ಹಕ್ಕಿಯನ್ನು ಹೋಲುತ್ತಿದ್ದ ಆ ಕೆಂಪು ಕೇಸರಿ ಎದೆಯ ಪುಟ್ಟ ಹಕ್ಕಿಯನ್ನು ಇಲ್ಲಿನ ಜನ ‘ರಾಬಿನ್’ ಎಂದು ಕರೆಯುತ್ತಿದ್ದರು. ಆ ದಿನದಿಂದ ನನಗೆ ಈ ಹಕ್ಕಿಯನ್ನು, ಆ ಹಳದಿ ಕೆಂಪು ಎಲೆಗಳ ಮಧ್ಯೆ ಹುಡುಕುವುದೇ ಒಂದು ಆಟವಾಯಿತು. ಅದರ ವಿಧ ವಿಧದ ಚಿಲಿಪಿಲಿ ಗಾಯನ ಕೇಳುವುದು ನನ್ನ ದಿನಚರಿಯ ಭಾಗವಾಯಿತು.

ಈ ಹಕ್ಕಿಯ ಚಂದ ಚಂದದ ಫೋಟೊಗಳನ್ನು ಕ್ಲಿಕ್ಕಿಸಿದಾಗೆಲ್ಲ, ಅದರ ಬಗ್ಗೆ ತಿಳಿದುಕೊಳ್ಳುವ ಹಂಬಲ ಹೆಚ್ಚಾಗುತ್ತಿತ್ತು. ಪಾರ್ಕ್‌ನಲ್ಲಿ ಸಿಗುವ ಹಿರಿಯರೊಂದಿಗೆ, ಸ್ನೇಹಿತರೊಂದಿಗೆ ಮಾತಾಡುತ್ತ, ಈ ಹಕ್ಕಿಯ ಬಗ್ಗೆ ಒಂದಷ್ಟು ವಿಷಯ ತಿಳಿದುಕೊಂಡೆ.

